

ಲಿದ್ದರ್ ನದಿ ತೀರದಲ್ಲಿ
ಕನ್ನಡ ಬಾವುಟ
ಹಾರಾಟ

# ಪಹಲ್ಗಾಮ್ ಕಣಿವೆ

## ಕನ್ನಡದ ಹೃದಯಗಳಿಂದ

## ಮಡುಗಟ್ಟಿದ ಬದುಕಿಗೆ ಆಶಾಕಿರಣ

ಮತ್ತೆ ಮಂಜು ಬೀಳಲಾರಂಭಿಸಿದೆ, ಹಸಿರು ಹೊತ್ತ ಮರಗಳ ಮೇಲೆ ಹಿಮ ಬಿಳಿಯ ಬಣ್ಣ ಬಳಿಯುತ್ತಿದೆ, ಶ್ವೇತಮಯ ಗುಡ್ಡಗಳು ಸೂರ್ಯನ ಪ್ರಕಾಶವನ್ನು ಚೆನ್ನದ ಕಿರಣಗಳನ್ನಾಗಿಸುತ್ತಿವೆ. ಮೈಕೈ ಕೊರೆಯುವ ಚಳಿ, ಪ್ರಕೃತಿ ಸೌಂದರ್ಯವನ್ನು ಸವಿಯಲು ಪ್ರವಾಸಿಗರಿಗೆ ಆಹ್ಲಾದಕರ ವೇದಿಕೆಯನ್ನು ಸೃಷ್ಟಿಸಿದ್ದರೂ ಆತಂಕದ ಛಾಯೆ ಮಾತ್ರ ಕರಗಿಲ್ಲ. ಗುಂಡಿನ ಶಬ್ದ, ಸಿಂಧೂರವನ್ನು ಕಳೆದುಕೊಂಡ ಮಹಿಳೆಯರ ಆರ್ತನಾದ ಸ್ಥಳೀಯರ ಕಿವಿಯಲ್ಲಿ ಇನ್ನೂ ಗುಯ್‌ಗುಡುತ್ತಲೇ ಇದೆ. ಇಂತಹ ಮಡುಗಟ್ಟಿದ ಪಹಲ್ಗಾಮ್‌ಗೆ ನೂರಾರು ಕನ್ನಡ ಹೃದಯಗಳು ಸಾಂತ್ವನ ಹೇಳಿ, ಭರವಸೆಯ ಆಶಾಕಿರಣವನ್ನು ಮೂಡಿಸಿದವು...

■ ಆರ್. ಮಂಜುನಾಥ್

ಪಹಲ್ಗಾಮ್ ಎಂದ ಕೂಡಲೇ 2025ರ ಏಪ್ರಿಲ್ 22ರಂದು ನಡೆದ ಘಟನೆ ಕಣ್ಣ ಮುಂದೆ ಹಾದುಹೋಗುತ್ತದೆ. ಅಂದು, ಯಾವ ತಪ್ಪೂ ಮಾಡದ 26 ಮಂದಿಯ ಎದೆಗೆ ಗುಂಡಿಕ್ಕಿದ್ದಕ್ಕೆ ಇಡೀ ದೇಶವೇ ರೋದಿಸಿತ್ತು. ಪತ್ನಿ, ಮಕ್ಕಳ ಮುಂದೆಯೇ ಅಮಾಯಕ ಪ್ರವಾಸಿಗರ ಮೇಲಿನ ಉಗ್ರರ ಅಟ್ಟಹಾಸ ನೆನೆದು ರಕ್ತ ಕುದಿಯುತ್ತದೆ. ಅಂದಿನ ದಿನದ ಭೀಕರತೆಗೆ ಆತಂಕದ ಛಾಯೆಯಲ್ಲಿ ಮುಳುಗಿದ ಪಹಲ್ಗಾಮ್ ಕಣಿವೆ, ಇನ್ನೂ ಅದರಿಂದ ಹೊರಬರಲಾರದೆ ನಡುಗುತ್ತಿದೆ.

ಉಗ್ರರ ಆರ್ಭಟಕ್ಕೆ ತತ್ತರಿಸಿದ್ದ ಪಹಲ್ಗಾಮ್ ಏಳು ತಿಂಗಳಾದರೂ ಮೈಕೊಡವಿ ಎದ್ದಿಲ್ಲ. ಇಲ್ಲಿರುವ ಸುಮಾರು 13 ಸಾವಿರ ಜನರ ಹೊಟ್ಟೆಪಾಡು ಪ್ರವಾಸೋದ್ಯಮದ ಮೇಲೇ ಅವಲಂಬಿತವಾಗಿದೆ. ನೇಯ್ಗೆ ಇಲ್ಲಿ ಪ್ರಮುಖ ವೃತ್ತಿಯಾದರೂ, ಅದು ಉತ್ಪನ್ನವಾದ ಮೇಲೆ ಕೊಂಡುಕೊಳ್ಳುವವರು ಬೇಕಲ್ಲವೇ? ಅಂತಹ ಪ್ರವಾಸಿಗಳು ಇತ್ತ ಸುಳಿಯುವುದು ತೀರಾ ವಿರಳವಾಗಿದೆ. ಹೀಗಾಗಿ, ಪಹಲ್ಗಾಮ್ ನಿವಾಸಿಗಳ ಬದುಕಿಗೆ ಆರ್ಥಿಕ ಉತ್ತೇಜನ ಸಿಕ್ಕಿಲ್ಲ.

ಇಂತಹ ಆತಂಕದ ಛಾಯೆಯಲ್ಲೇ ಜೀವನ ಸವೆಸುತ್ತಿರುವ ಪಹಲ್ಗಾಮ್ ನಿವಾಸಿಗಳಿಗೆ ಕನ್ನಡ ಮನಸ್ಸುಗಳು ಸಾಂತ್ವನ ಹೇಳಿದವು. ಇಬ್ಬನಿಯ ಸಿಂಚನದಲ್ಲಿ ಹಳದಿ–ಕೆಂಪು ಬಣ್ಣದ ಕನ್ನಡ ಬಾವುಟವನ್ನು ಹಾರಿಸಿ, ಕರ್ನಾಟಕ ರಾಜ್ಯೋತ್ಸವ ಸೊಬಗನ್ನು ಬಿತ್ತರಿಸಿ, ಮಡಿದ ಆತ್ಮಗಳಿಗೆ